

# ಬೆಂಗಳೂರಿಗರ ಕೈತೋಟದಲ್ಲಿ ರಂಗೂನಿನ ಬಳ್ಳಿ ಕಂಡಿರಾ?

– ಡಾ. ಸತ್ಯ

ಕನ್ನಡಿಗರ ಬಾಯಲ್ಲಿ ಅವಲಕ್ಕಿ ಹೂವೆಂದೋ,ಈಶ್ವರ ಹೂವೆಂದೋ ಕರೆಯಿಸಿಕೊಳ್ಳುವ ಬಳ್ಳಿಗೆ ನಿಮ್ಮ ಮನೆಯಂಗಳದಲ್ಲಿ ಬೆಳೆಯುವ ಯೋಗ್ಯತೆ ಇದೆ. ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಶರ ವಸಾಹತು ಆಡಳಿತದಲ್ಲಿ ಬರ್ಮದೇಶದ ಮಳೆಕಾಡುಗಳಿಂದ ಭಾರತಕ್ಕೆ ವಲಸೆ ಬಂದ ಬಳ್ಳಿಗೆ ಬರ್ಮ್ಾದ ಪಟ್ಟಣದ ಹೆಸರು ತಳುಕುಹಾಕಿಕೊಂಡಿದೆ.ಆಂಗ್ಲಭಾಷೆಯಲ್ಲಿ ಇದರ ಹೆಸರು ರಂಗೂನ್ ಬಳ್ಳಿ. ಈ ಬಳ್ಳಿ ಮೂಲತ: ಮಲಯಾ ಅರ್ಚಿಪೆಲಾಗೊ ಕಡೆಯದೆಂದು ಸಸ್ಯಶಾಸ್ತ್ರಜ್ಞರ ಅಭಿಪ್ರಾಯ. ಬೆಂಗಳೂರು ಮಾತ್ರ ಅಲ್ಲ. ಇಡಿಯ ದೇಶದಲ್ಲಿಂದು ಉದ್ಯಾನದ ಅಂದಚಂದದ ಬೆಡಗಿನ ಬಳ್ಳಿಯಾಗಿ ಈ ಈಶ್ವರಹೂ ಬಳ್ಳಿ ಆಯ್ಕೆಗೊಳ್ಳುತ್ತದೆ. ಈ ಬೆಡಗಿನಬಳ್ಳಿಯ ಗಾತ್ರ ಬಲುದೊಡ್ಡದು.ಹಾಗಾಗಿ ಬೇಲಿಯಂಚು ಅಥವಾ ಮಹಡಿಯ ಬದಿಗೆ ಹಾಕಬಹುದಾಗಿದೆ. ಚಪ್ಪಟೆ ಬೀಜ ಅಥವಾ ಬಲಿತಕಾಂಡದಿಂದ ಹೊಸಗಿಡ ಚಿಗುರಿಸಿಕೊಳ್ಳಬಹುದು. ಕಾಂಬ್ರಟೇಸಿ ಕುಲದ ಈ ಬಳ್ಳಿಯ ಲ್ಯಾಟಿನ್ ಹೆಸರು ಉಚ್ಚಾರಣೆಗೆ ನಿಮ್ಮ ನಾಲಿಗೆ ಪರಿಣಿತಿ ಪಡೆಯಬೇಕು.ಕ್ವಿಸ್ ಕ್ವಾಲಿಸ್ ಇಂಡಿಕಾ! ಎದುರು ಬದಿರೆಲೆ. ಕಿರಿದೋಣಿಯಕಾರದ ಎಲೆಗಳು.ಎಲೆಕಂಕುಳಿನ ಅಥವಾ ರೆಂಬೆ ತುದಿಯ ಹೂ ಗೊಂಚಲು. ಅಚ್ಚಬಿಳಿಯ ಅವಲಕ್ಕಿ ಆಕಾರದ ಐದು ಪಕಳೆ.

ಹೂ ತೊಟ್ಟು ತುಂಬ ಉದ್ದನೆಯದು. ಬೇಗ ಬಾಡದ ಹೂಗಳು. ನಾಕಾರು ದಿನಗಳಲ್ಲಿ ಬಿಳಿಹೂ ತಿಳಿ ಕೆಂಪು ಅನಂತರ ದಟ್ಟ ಕೆಂಪು ಬಣ್ಣತಳೆಯುತ್ತದೆ. ಬಹುತೇಕ ವರ್ಷಪೂರ್ತಿ ಹೂದಳೆಯುವ ಬಳ್ಳಿ ಇದು. ಎಲೆಗಳು ಸಹ ಅಂದವಾಗಿವೆ. ಹಾಗಾಗಿ ಸಸ್ಯವೈವಿಧ್ಯದ ಪ್ರೀತಿ ನಿಮಗಿದ್ದರೆ ಇದರ ಬಲಿತ ರೆಂಬೆ ನಿಮ್ಮಂಗಳದ ಕುಂಡ ಅಥವಾ ಮೂಲೆಗೆ ಊರಿಬಿಡಿ. ಚಿಗುರಿದ ಬಳ್ಳಿಯ ಹೂಗೊಂಚಲು ದಾರಿಹೋಕರ ಕಣ್ಣಿಗೆ ಹಬ್ಬ. ಕೀಟ ಸಂಕುಲಕ್ಕೆ ಹೋಳಿಗೆಯೂಟ! ಈ ರಂಗೂನ್ ಕ್ರೀಪರ್ ನಿರುಪಯೋಗಿ ಹೂಬಳ್ಳಿಯಲ್ಲ.ಹತ್ತಾರು ಬಳಕೆಯ ಬಳ್ಳಿ. ಬೇರು, ಬಲಿತ ಬೀಜ ಬಳಸಿ ಹೊಟ್ಟೆಯ ಜಂತಿನ ತೊಂದರೆ ಪರಿಹರಿಸಲು ಸಾಧ್ಯ. ಬೀಜ ಹುರಿದು ತಿನ್ನಲೂ ಬಹುದು. ಅದರಿಂದ ಜ್ವರ, ಭೇದಿ, ಮಿದುಮೂಳೆಯ ರಿಕೆಟ್ಸ್ ಕಾಯಿಲೆಗೆ ಪರಿಹಾರ ಎಂಬ ಉಲ್ಲೇಖ ಇದೆ. ಅರೆದುಕೊಬ್ಬರಿಎಣ್ಣೆ ಜತೆಗೆ ಬೀಜ ಲೇಪನದಿಂದ ಚರ್ಮಕಾಯಿಲೆ ವಾಸಿ. ಹೇನು,ಕೂರೆ ನಿವಾರಣೆ. ಎಣ್ಣೆಯ ತೈಲಾಂಶಕ್ಕೆ ಭೇದಿಮಾಡಿಸುವ ಗುಣವಿದೆ. ಎಳೆ ಕುಡಿಯನ್ನು ಹಸಿಯಾಗಿ ಅಥವಾ ಬೇಯಿಸಿ ತರಕಾರಿಯಾಗಿ ಬಳಸಬಹುದು. ಬಲಿತಕಾಂಡ ಮಾರುಗಟ್ಟಲೆ ಉದ್ದನೆಯದಾಗಿರುವುದು. ಅದು ಬುಟ್ಟಿ, ಮೀನು ಹಿಡಿವ ಮಂಕರಿ ಅಥವಾ ಪೀಠೋಪಕರಣಕ್ಕೆ ಹೆಣೆಯುವ ಬಳ್ಳಿ. ಹೆಸರರಿಯದ ಸುಂದರಿ ಬೆಡಗಿನ ಬಳ್ಳಿಗಳಿಗಿಂತ ನಿಮ್ಮ ಮನೆಯಂಗಳಕ್ಕೆ ರಂಗೂನು ಸುಂದರಿ ಮೇಲಲ್ಲವೆ?

